ಕರ್ನಾಟಕ ಸರ್ಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ.ಕಂ/ಪಹಣಿ/ವಿವಾದ/72/2014-15

ದಿನಾಂಕ: 26-05-2016

ಉಪಸ್ಥಿತರು : ಹೆಚ್.ವಿಶ್ವನಾಥ, ತಹಶೀಲ್ದಾರರು,

| ವಾದಿಗಳು | ಪ್ರತಿವಾದಿಗಳು / ಎದುರುದಾರರು |
|---|---|
| ಶ್ರೀ.1)ಮಾಚೇನಹಳ್ಳಿ ನಾಗಮ್ಮ ಗಂಡ ಸಿದ್ದಪ್ಪ<br>2)ಬಸಪ್ಪಳವರ ನಿಂಗಪ್ಪ ತಂದೆ ಲೇಟ್ ಫಕ್ಕೀರಪ್ಪ<br>3)ಬಸಪ್ಪಳವರ ಸೋಮಲಿಂಗಪ್ಪ ತಂದೆ ಲೇಟ್ ಫಕ್ಕೀರಪ್ಪ<br>4)ಬಸಪ್ಪಳವರ ಅಶೋಕಪ್ಪ ತಂದೆ ಲೇಟ್ ಫಕ್ಕೀರಪ್ಪ<br>5)ನಾಗನೂರ ಮೀನಾಕ್ಷಮ್ಮ ಗಂಡ ಗುಡ್ಡಪ್ಪ<br>ಗಂಗಾಪುರ ಗ್ರಾಮ ರಾಣೆಬೆನ್ನೂರ ತಾಲೂಕು | ಕಂದಾಯ ನೀರೀಕ್ಷಕರು ಹಿರೇಹಡಗಲಿ |

**ದಾವಾ ಜಮೀನಿನ ವಿವರ**

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| ಹ್ಯಾರಡ | 228/b/b2<br>229/a | 0.65<br>0.23 |

**ಪ್ರಸ್ತಾವನೆ :**

ಮೇಲಿನ ದಾವಾ ಜಮೀನಿಗೆ ಸಂಬಂದಿಸಿದಂತೆ ಶ್ರೀ ಬಸಪ್ಪಳವರ ಅಶೋಕಪ್ಪ ತಂದೆ ಲೇಟ್ ಫಕ್ಕೀರಪ್ಪ ಇವರು ದಿನಾಂಕ 25/09/2014 ರಂದು ವಂಶವೃಕ್ಷ ಹಾಗು ಮತದಾರರ ಗುರುತಿನ ಚೀಟಿಗಳನ್ನು ಲಗತ್ತಿಸಿ ಅರ್ಜಿ ಸಲ್ಲಿಸಿ ತಮ್ಮ ತಾಯಿ ಬಸಪ್ಪಳವರ ಪುಟ್ಟಮ್ಮ ಇವರು ದಿನಾಂಕ 05/10/1997 ರಂದು ಮರಣ ಹೊಂದಿದ ಬಗ್ಗೆ ಮರಣ ಸಮರ್ಥನ ಪತ್ರ ನೀಡಿ ಎಲ್ಲಾ ವಾರಸುದಾರರ ಹೆಸರಿನಲ್ಲಿ ಜಂಟಿ ಪೌತಿ ಪಟ್ಟ ಮಾಡಲು ಅರ್ಜಿ ಸಲ್ಲಿಸಿರುತ್ತಾನೆ.ಈ ಮೇರೆಗೆ ಎಂ ಆರ್ ಸಂಖ್ಯೆ ಹೆಚ್16/2014-15 ರಲ್ಲಿ ಪ್ರಕರಣ ದಾಖಲಿಸಿಕೊಂಡು ನಮೂನೆ 21 ನೋಟೀಸನ್ನು ಜಾರಿ ಮಾಡಿ ಪ್ರಚುರಪಡಿಸಿರುತ್ತದೆ.ನೋಟೀಸು ಪ್ರಚುರಪಡಿಸಿದ ನಿಗದಿತ ಅವದಿಯೊಳಗೆ ಯಾರಿಂದಲು ತಕರಾರು ಬಂದಿರುವುದಿಲ್ಲ.ಆದರೆ ನಮೂನೆ 21 ನೋಟೀಸನ್ನು ಬಸಪ್ಪಳವರ ನಿಂಗಪ್ಪ ತಂದೆ ಲೇಟ್ ಫಕ್ಕೀರಪ್ಪ ಇವರು ಸ್ವೀಕರಿಸಲು ನಿರಾಕರಿಸಿದ ಕಾರಣ ಕಂದಾಯ ನೀರೀಕ್ಷಕರು ಹಿರೇಹಡಗಲಿ ಇವರು ಪ್ರಕರಣವನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿಗಳಿಗೆ ಕೇಳಿಕೊಳ್ಳಲು ಅವಕಾಶ ನೀಡಿ, ದಿನಾಂಕ 19/01/2015 ರಂದು ವಿಚಾರಣೆಗೆ ಹಾಜರಾಗಲು ನೋಟೀಸು ನೀಡಿ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿ ದಿನಾಂಕ 16/07/2015 ರಂದು ಅಂತಿಮಗೊಳಿಸಲಾಯಿತು. ವಿಚಾರಣೆಗೆ ವಾದಿಗಳು ಸತತವಾಗಿ ಗೈರು ಹಾಜರಾಗಿರುತ್ತಾರೆ.ಕಾರಣ ನೊಂದಾಯಿತ ಅಂಚೆ ಮೂಲಕ ಎಲ್ಲಾ ವಾದಿಗಳಿಗೆ ನೋಟೀಸು ಜಾರಿ ಮಾಡಿದರು ಸಹ ಇವರುಗಳು ವಿಚಾರಣೆಗೆ ಗೈರು ಹಾಜರಾಗಿರುತ್ತಾರೆ.ಈ ಕಾರಣದಿಂದ ವಾದಿಗಳ ಹೇಳಿಕೆ ಅನುಪಸ್ಥಿತಿಯಲ್ಲಿ ಪ್ರಕರಣದಲ್ಲಿ ತೀರ್ಮಾನ ತೆಗೆದುಕೊಳ್ಳಲು ಸಾದ್ಯವಾಗದ ಕಾರಣ ಈ ಕೆಳಕಂಡ

## ಆದೇಶ

ಪ್ರಕರಣದ ಹಿನ್ನೆಲೆ, ವಾಸ್ತವಾಂಶ ಹಾಗು ದಾಖಲೆಗಳನ್ವಯ ಪ್ರಕರಣದಲ್ಲಿ ವಾದಿಗಳಿಗೆ ಯಾವುದೇ ಆಸಕ್ತಿ ಇಲ್ಲದಿರುವುದರಿಂದ ದಾಖಲೆಗಳಲ್ಲಿ ಯಥಾಸ್ಥಿತಿ ಮುಂದುವರೆಸಿ ಪ್ರಕರಣವನ್ನು ವಿಲೇಗೊಳಿಸಲು ಆದೇಶಿಸಿದೆ. .

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| ಹ್ಯಾರಡ | 228/b/b2<br>229/a | 0.65<br>0.23 |

ಈ ಆದೇಶವನ್ನು ಬೆರಳಚ್ಚುಮಾಡಿಸಿ, ದಿನಾಂಕ 26-05-2016ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

26/5/16

ತಹಶೀಲ್ದಾರರು
ಹಡಗಲಿ.

ಪ್ರತಿಗಳನ್ನು :

1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.

2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.